# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಕೆ. ಎ. ತಿಪ್ಪೇಸ್ವಾಮಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 967

ಉತ್ತರಿಸಬೇಕಾದ ದಿನಾಂಕ : 21.12.2021

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ 5 ವರ್ಷಗಳಲ್ಲಿ ರಾಜ್ಯದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ರಾಜ್ಯದ ಅಪೆಕ್ಸ್ ಮುಖಾಂತರ ನೀಡಿರುವ ಸಾಲಗಳ ಮೊತ್ತವೆಷ್ಟು; ಈ ಸಾಲಗಳನ್ನು ಯಾವ ಬಡ್ಡಿದರದಲ್ಲಿ ನೀಡಲಾಗುತ್ತಿದೆ; ಈ ಜಿಲ್ಲಾ ಬ್ಯಾಂಕುಗಳು ಯಾವ ಬಡ್ಡಿ ದರದಲ್ಲಿ ರೈತರಿಗೆ ಸಾಲವನ್ನು ನೀಡುತ್ತವೆ; (ಜಿಲ್ಲಾವಾರು, ವಿವಿಧ ಸಾಲವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಕಳೆದ 5 ವರ್ಷಗಳಲ್ಲಿ ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ರಾಜ್ಯದ ಅಪೆಕ್ಸ್ ಬ್ಯಾಂಕ್ ಮುಖಾಂತರ ವರ್ಷವಾರು ನೀಡಿರುವ ಸಾಲಗಳ ಮೊತ್ತದ ವಿವರ ಈ ಮುಂದಿನಂತೆ ಇರುತ್ತದೆ.
<table>
<tr><th>ವರ್ಷ</th><th>2016-2017</th><th>2017-2018</th><th>2018-2019</th><th>2019-2020</th><th>2020-2021</th></tr>
<tr><td>ಒಟ್ಟು ಸಾಲದ ಮೊತ್ತ</td><td>7,665.50</td><td>7,526.73</td><td>8,227.11</td><td>9,669.67</td><td>12,326.65</td></tr>
</table>
ಅಪೆಕ್ಸ್ ಬ್ಯಾಂಕ್ ಮುಖಾಂತರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ನೀಡಿರುವ ಅಲ್ಪಾವಧಿ ಕೃಷಿಸಾಲ, ಮಧ್ಯಮಾವಧಿ ಕೃಷಿಸಾಲ, ದೀರ್ಘಾವಧಿ ಕೃಷಿ ಸಾಲ ಮತ್ತು ಕೃಷಿಯೇತರ ಸಾಲಗಳಿಗೆ ವರ್ಷವಾರು ವಿಧಿಸಿರುವ ಬಡ್ಡಿ ದರದ ವಿವರಗಳನ್ನು ಅನುಬಂಧ-01 ರಲ್ಲಿ ನೀಡಲಾಗಿದೆ.<br>
2016-2017 ರಿಂದ 2020-2021ನೇ ಸಾಲಿನಲ್ಲಿ ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಪ್ಯಾಕ್ಸ್ ಮೂಲಕ ರೈತರಿಗೆ ನೀಡಿರುವ ವಿವಿಧ ಸಾಲ ಮತ್ತು ಅದರ ಮೇಲೆ ವಿಧಿಸಿರುವ ಬಡ್ಡಿ ದರದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-02 ರಲ್ಲಿ ನೀಡಲಾಗಿದೆ .</td></tr>
</table>

| | | |
|---|---|---|
| ಆ | ಸಾಲ ಅರ್ಹತೆ ಮಾನದಂಡಗಳಾವುವು: (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಸಹಕಾರ ಆಪೆಕ್ಸ್ ಬ್ಯಾಂಕ್ಮೂಲಕ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ಗಳಿಗೆ ಸಾಲ ಮಂಜೂರು ಮಾಡಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸುತ್ತಿದೆ.<br>1. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಗಳು ಬ್ಯಾಂಕಿಂಗ್ ಕಾಯ್ದೆ 1949ರ ಕಲಂ 11ರ ಅನುಪಾಲನೆ ಮಾಡಿರಬೇಕು.<br>2. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಸಿಆರ್‌ಎಆರ್ (Capital to Risk Asset Weighted Ratio) ಶೇ.9 ಅಥವಾ ಅದಕ್ಕಿಂತ ಹೆಚ್ಚಿರಬೇಕು.<br>3. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ನಿವ್ವಳ ಅನುತ್ಪಾದಕ ಆಸ್ತಿಯು ಶೇ.12 ಕ್ಕೆ ಮೀರಬಾರದು.<br>4. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಹೆಚ್ಚುವರಿ ಎನ್‌ಓಡಿಸಿಯನ್ನು. (Non Overdue Coverage) ಪಾಲನೆ ಮಾಡಿರಬೇಕು.<br>5. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಗಳು ಅಪೆಕ್ಸ್ ಬ್ಯಾಂಕಿನಿಂದ ಪಡೆದಿರುವ ಸಾಲಗಳು ಸುಸ್ತಿಯಾಗಿರಬಾರದು.<br>6. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಶಾಸನಬದ್ಧ ಮೀಸಲು ಅನುಪಾತ ಮತ್ತು ನಗದು ಮೀಸಲು ಅನುಪಾತವನ್ನು ಪಾಲಿಸಿರಬೇಕು.<br>7. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಗಳು ಪುನರ್ಧನವನ್ನು ಪಡೆಯಲು ಸಾಕಷ್ಟು ಮೀಸಲು ಎರವಲು ಶಕ್ತಿ (Reserve Borrowing Power) ಹೊಂದಿರಬೇಕು.<br>8. ಸಾಲಮಿತಿ ನಿಗದಿಪಡಿಸಲು ಈ ಕೆಳಕಂಡ ಮಾನದಂಡಗಳಿರುತ್ತವೆ. |

| ಡಿ.ಸಿ.ಸಿ. ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿ (%) | ಡಿ.ಸಿ.ಸಿ. ಬ್ಯಾಂಕ್ ಸದ್ಯಸರಿಗೆ ವಿತರಿಸಿದ ಸಾಲದ ಮೇಲೆ ಆಪೆಕ್ಸ್ಬ್ಯಾಂಕಿನ ಪುನರ್ಧನ ಮಿತಿ (%) |
|---|---|
| ಶೇ.6 | 40(%) |
| ಶೇ.6–10 | 35(%) |
| ಶೇ.10–12 | 30(%) |

| | | |
|---|---|---|
| ಇ | ಜಿಲ್ಲಾ ಕೇಂದ್ರ ಬ್ಯಾಂಕುಗಳು ಈ ಸಾಲಗಳನ್ನು ಯಾವ ಯಾವ ಮಾನದಂಡದ ಆಧಾರದ ಮೇಲೆ ಸ್ಥಳೀಯರಿಗೆ ನೀಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಗಳು, ಶಾಖೆ ಮತ್ತು ಪ್ಯಾಕ್ಸ್‌ಗಳ ಮೂಲಕ ಸ್ಥಳೀಯರಿಗೆ ಮತ್ತು ಸದ್ಯಸರಿಗೆ ಸಾಲ ವಿತರಿಸಲು ನಿಗದಿಪಡಿಸಿರುವ ಮಾನದಂಡಗಳ ವಿವರವನ್ನು **ಅನುಬಂಧ-03** ರಲ್ಲಿ ನೀಡಲಾಗಿದೆ. |
| ಈ | ಜಿಲ್ಲೆಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನವರು ವಿವಿಧ ಶಾಖೆಗಳ ನಕಲಿ ಸದಸ್ಯರ ಹೆಸರಿನಲ್ಲಿ ಹೆಚ್ಚಿನ ಮೊತ್ತದ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸಂಪೂರ್ಣ ಮಾಹಿತಿ ನೀಡುವುದು: ಈ ಅವ್ಯವಹಾರದಲ್ಲಿ ಪಾಲ್ಗೊಂಡಿರುವವರ ಹೆಸರು, ಹುದ್ದೆ ಇವರುಗಳ (ಸಂಪೂರ್ಣ ಮಾಹಿತಿ ನೀಡುವುದು) | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಶಿವಮೊಗ್ಗ ಜಿಲ್ಲಾ ಕೇಂದ್ರ ಬ್ಯಾಂಕಿನ ನಗರ ಶಾಖೆಯಲ್ಲಿ ನಕಲಿ ಸದ್ಯಸರ ಹೆಸರಿನಲ್ಲಿ ಚಿನ್ನಾಭರಣ ಸಾಲ ವಿತರಣೆಯಾಗಿರುವುದು ಕಂಡು ಬಂದಿರುತ್ತದೆ. ಅವ್ಯವಹಾರದಲ್ಲಿ ಭಾಗಿಯದ ಸಿಬ್ಬಂದಿಗಳ ವಿವರ **ಅನುಬಂಧ-04** ರಲ್ಲಿ ನೀಡಲಾಗಿದೆ. |
| ಉ | ನಬಾರ್ಡ್ ಸಂಸ್ಥೆಯು ಇತ್ತೀಚಿನ ವರ್ಷಗಳಲ್ಲಿ ಅಪೆಕ್ಸ್ ಬ್ಯಾಂಕ್ಕಾರ್ಯವೈಖರಿಯ ಬಗ್ಗೆ ತನ್ನ ತನಿಖಾ ವರದಿಯನ್ನು ಸಾಕಷ್ಟು ಆಕ್ಷೇಪಣೆಗಳನ್ನು ದಾಖಾಲಿಸಿರುವುದು ನಿಜವೇ; ಹಾಗಿದ್ದಲ್ಲಿ ಈ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ನಬಾರ್ಡ್‌ನ ಪರಿವೀಕ್ಷಣಾಧಿಕಾರಿಗಳು ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ 1949ರ ಕಲಂ 35(6) ರ ಪ್ರಕಾರ ಬ್ಯಾಂಕಿನ 2019-20ನೇ ಸಾಲಿನ ಶಾಸನಬದ್ಧ ಪರಿವೀಕ್ಷಣೆಯನ್ನು ದಿನಾಂಕ:08.02.2021 ರಿಂದ 04.03.2021 ರವರೆಗೆ ನಡೆಸಿರುತ್ತಾರೆ. ತತ್ಸಂಬಂಧ ದಿನಾಂಕ:05.04.2021 ರಂದು ಪರಿವೀಕ್ಷಣಾ ವರದಿಯನ್ನು ಬ್ಯಾಂಕಿಗೆ ರವಾನಿಸಿ, ಇದಕ್ಕೆ ಅನುಪಾಲನಾ ವರದಿಯನ್ನು ನೀಡುವಂತೆ ಸೂಚಿಸಿರುತ್ತಾರೆ. ಸಹಕಾರ ಸಂಘಗಳ ನಿಬಂಧಕರ ಕಛೇರಿಯಿಂದಲೂ ಪತ್ರ ಸಂಖ್ಯೆ: RCS/CRD/KME-8/63/2020-21, ದಿನಾಂಕ:22.07.2021ರ ಮೂಲಕ ಬ್ಯಾಂಕಿನ ದಿನಾಂಕ:31.03.2020ರ ಅಂತ್ಯಕ್ಕೆ ಸಂಬಂಧಿಸಿದಂತೆ ನಬಾರ್ಡ್ ಪರಿವೀಕ್ಷಣಾ ವರದಿಗೆ ಅನುಪಾಲನಾ ವರದಿಯನ್ನು ನಬಾರ್ಡ್ಕಛೇರಿಗೆ ಸಲ್ಲಿಸುವಂತೆ ತಿಳಿಸಲಾಗಿದ್ದು, ಆಪೆಕ್ಸ್ ಬ್ಯಾಂಕಿನವರು ನಬಾರ್ಡ್ ಪರಿವೀಕ್ಷಣಾ ವರದಿಗೆ ಅನುಪಾಲನಾ ವರದಿಯನ್ನು ದಿನಾಂಕ:17.06.2021 ರಂದು ಸಲ್ಲಿಸಿರುತ್ತದೆ. ತದನಂತರ ನಬಾರ್ಡ್ ಮುಂದುವರೆದ ಅನುಪಾಲನಾ ವರದಿಯನ್ನು ನೀಡುವಂತೆ ದಿನಾಂಕ:02.07.2021ರ ಪತ್ರದ ಮೂಲಕ ಬ್ಯಾಂಕಿಗೆ ಸೂಚಿಸಿದ್ದು, ಇದಕ್ಕೆ |

| | | |
|---|---|---|
| | | ಬ್ಯಾಂಕಿನ ವತಿಯಿಂದ ದಿನಾಂಕ:02.08.2021 ರಂದು ಅನುಪಾಲನೆಯನ್ನು ನಬಾರ್ಡ್ ಕಛೇರಿಗೆ ನೀಡಲಾಗಿದ್ದು, ಪುನಃ ನಬಾರ್ಡ್ ಕಛೇರಿಯಿಂದ ದಿನಾಂಕ:31.08.2021 ರಂದು ಎರಡನೆಯ ಬಾರಿಗೆ ಮುಂದುವರೆದ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಆಪೆಕ್ಸ್ ಬ್ಯಾಂಕಿಗೆ ಸೂಚಿಸಿದ್ದು, ಈ ಸಂಬಂಧ ಅಪೆಕ್ಸ್ ಬ್ಯಾಂಕಿನಿಂದ ದಿನಾಂಕ:17.09.2021 ರಂದು ಸಮಜಾಯಿಷಿಯನ್ನು ನೀಡಿರುತ್ತದೆ. ಅಪೆಕ್ಸ್ ಬ್ಯಾಂಕಿನ ಅನುಪಾಲನೆಯನ್ನು ನಬಾರ್ಡ್‌ನಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. |

**ಸಂಖ್ಯೆ: ಸಿಒ 383 ಸಿಎಲ್ಎಸ್ 2021**

(ಎಸ್.ಟಿ. ಸೋಮಶೇಖರ್)

**ಸಹಕಾರ ಸಚಿವರು**

## ಮುಖಾಂತರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ನೀಡಿರುವ ಅಲ್ಪಾವಧಿ ಕೃಷಿಸಾಲ, ಮಧ್ಯಮಾವಧಿ ಕೃಷಿ ಸಾಲ, ದೀರ್ಘಾವಧಿ ಕೃಷಿ ಸಾಲ ಮತ್ತು ಕೃಷಿಯೇತರ ಸಾಲಗಳಿಗೆ ವರ್ಷವಾರು ವಿಧಿಸಿರುವ ಬಡ್ಡಿ ದರದ ವಿವರ

### ಅನುಬಂಧ – 01

| ವರ್ಷ | ಅಲ್ಪಾವಧಿ ಕೃಷಿ ಸಾಲ (ರಿಯಾಯಿತಿ ಬಡ್ಡಿ ದರ) (%) | ಅಲ್ಪಾವಧಿ ಕೃಷಿ ಸಾಲ (ಹೆಚ್ಚಿನ ಬಡ್ಡಿ ದರ (%) | ಅಲ್ಪಾವಧಿ ಕೃಷಿ ಸಾಲ (ಇತರೆ) (%) | ಮಧ್ಯಮಾವಧಿ ಕೃಷಿ ಸಾಲ (%) | ದೀರ್ಘಾವಧಿ ಕೃಷಿ ಸಾಲ (%) | ಕೃಷಿಯೇತರ ಸಾಲ (%) |
|---|---|---|---|---|---|---|
| 2016–2017 | 5.20 | – | – | 9.30, 9.20, 9.00, 8.90 | 5.70, 5.45 | 9.20, 8.90, 9.50, 10.00 |
| 2017–2018 | 5.20 | – | – | 8.50, 8.80, 8.90 | 4.95 | 8.50, 8.80, 8.90, 9.50, 10.00 |
| 2018–2019 | 5.20 | – | – | 5.00, 8.80, 9.30, 9.55, 9.65, 9.80 | 5.25 | 9.55, 9.60, 9.80 |
| 2019–2020 | 5.20 | 8.60, 8.25, 7.70, 7.25 | 8.60, 8.25, 7.70, 7.25 | 8.85, 9.05, 9.10, 9.45 | 4.45, 4.70 | 8.60, 8.85, 9.10, 9.45 |
| 2020–2021 | 5.00 | 5.55, 5.50 | 5.60 | 6.40, 7.15 | 3.20 | 3.05, 6.40, 7.15 |

(ಮೇಲಿನ ಬಡ್ಡಿ ದರಗಳು ವಿವಿಧ ಅವಧಿಗೆ ಇರುವ ಬಡ್ಡಿ ದರಗಳಾಗಿರುತ್ತವೆ)

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)

**2016-2017 ರಿಂದ 2020-2021 ನೇ ಸಾಲಿನಲ್ಲಿ ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಪ್ಯಾಕ್ಸ್‌ನ ಮೂಲಕ ರೈತರಿಗೆ ನೀಡಿರುವ ವಿವಿಧ ಸಾಲ ಮತ್ತು ಅದರ ಮೇಲೆ ವಿಧಿಸಿರುವ ಬಡ್ಡಿದರದ ಜಿಲ್ಲಾವಾರು ಮಾಹಿತಿ**

**ಅನುಬಂಧ - 2**

| ಕ್ರ.ಸಂ | ಬ್ಯಾಂಕಿನ ಹೆಸರು | ಅಲ್ಪಾವಧಿ ಕೃಷಿ ಸಾಲಕ್ಕೆ ವಿಧಿಸುತ್ತಿರುವ ಬಡ್ಡಿ ದರ | | ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲಕ್ಕೆ ವಿಧಿಸುತ್ತಿರುವ ಬಡ್ಡಿ ದರ | | ಕೃಷಿಯೇತರ ಸಾಲಕ್ಕೆ ವಿಧಿಸುತ್ತಿರುವ ಬಡ್ಡಿ ದರ |
|---|---|---|---|---|---|---|
| | | ರೂ.3 ಲಕ್ಷಗಳವರೆಗೆ | ರೂ. 3 ಲಕ್ಷಕ್ಕಿಂತ ಮೇಲ್ಪಟ್ಟು | ರೂ.10 ಲಕ್ಷಗಳವರೆಗೆ | ರೂ.10 ಲಕ್ಷಕ್ಕಿಂತ ಮೇಲ್ಪಟ್ಟು | |
| 01 | 02 | 03 | 04 | 05 | 06 | 07 |
| 01 | ಬಾಗಲಕೋಟೆ | 0 | - | 3.00 | - | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಗಳು ವಿತರಿಸುವ ವಿವಿಧ ರೀತಿಯ ಕೃಷಿಯೇತರ ಸಾಲಗಳಿಗೆ ತನ್ನ ಆಡಳಿತ ವೆಚ್ಚ, ಬಂಡವಾಳದ ವೆಚ್ಚಗಳನ್ನು ಆಧರಿಸಿ ವಿವಿಧ ಬಡ್ಡಿ ದರಗಳನ್ನು ನಿಗದಿಪಡಿಸಿರುತ್ತದೆ. |
| 02 | ಬಳ್ಳಾರಿ | 0 | 13.50 | 3.00 | 13.00 | |
| 03 | ಬೆಳಗಾವಿ | 0 | 08.60 | 3.00 | - | |
| 04 | ಬೆಂಗಳೂರು | 0 | - | 3.00 | - | |
| 05 | ಬೀದರ್ | 0 | - | 3.00 | - | |
| 06 | ಚಿಕ್ಕಮಗಳೂರು | 0 | - | 3.00 | - | |
| 07 | ಚಿತ್ರದುರ್ಗ | 0 | - | 3.00 | - | |
| 08 | ದಾವಣಗೆರೆ | 0 | - | 3.00 | - | |
| 09 | ಧಾರವಾಡ | 0 | - | 3.00 | - | |
| 10 | ಹಾಸನ | 0 | - | 3.00 | - | |
| 11 | ಕಲಬುರ್ಗಿ | 0 | - | 3.00 | - | |
| 12 | ಉತ್ತರ ಕನ್ನಡ | 0 | - | 3.00 | - | |

| | | | | | | |
|---|---|---|---|---|---|---|
| 13 | ಕೊಡಗು | 0 | – | 3.00 | – | |
| 14 | ಕೋಲಾರ | 0 | – | 3.00 | – | |
| 15 | ಮಂಡ್ಯ | 0 | – | 3.00 | – | |
| 16 | ಮೈಸೂರು | 0 | – | 3.00 | – | |
| 17 | ರಾಯಚೂರು | 0 | – | 3.00 | – | |
| 18 | ಶಿವಮೊಗ್ಗ | 0 | – | 3.00 | – | |
| 19 | ದಕ್ಷಿಣ ಕನ್ನಡ | 0 | – | 3.00 | – | |
| 20 | ತುಮಕೂರು | 0 | – | 3.00 | – | |
| 21 | ವಿಜಯಪುರ | 0 | – | 3.00 | – | |

(ರಿಯಾಯಿತಿ ಬಡ್ಡಿ ದರದಲ್ಲಿ ವಿತರಿಸಿದ ಸಾಲಗಳು ರೈತರು ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿಸಿದಲ್ಲಿ ಮಾತ್ರ ಅನ್ವಯವಾಗುತ್ತದೆ). (–) ಈ ಬ್ಯಾಂಕ್ ಗಳು ರೂ. 3 ಲಕ್ಷಕ್ಕಿಂತ ಹೆಚ್ಚಿನ ಬೆಳೆ ಸಾಲ ಹಾಗೂ ರೂ.10 ಲಕ್ಷಗಳಿಗಿಂತ ಹೆಚ್ಚಿನ ಮಧ್ಯಮಾವಧಿ/ ದೀರ್ಘಾವಧಿ ಸಾಲಗಳನ್ನು ನೀಡಿರುವುದಿಲ್ಲ.

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)

## ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಶಾಖೆಗಳು ಮತ್ತು ಪ್ಯಾಕ್ಸ್‌ಗಳ ಮೂಲಕ ಸ್ವಾಳೀಯರಿಗೆ ಹಾಗೂ ಸದ್ಯಸರಿಗೆ ಸಾಲ ವಿತರಿಸಲು ನಿಗದಿಪಡಿಸಿರುವ ಮಾನದಂಡಗಳ ವಿವರಗಳು

## ಅನುಬಂಧ – 03

1) **ರೂ.3.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಬೆಳೆ ಸಾಲ ಮತ್ತು ಪಶು ಸಂಗೋಪನೆ/ ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳವಾಗಿ ರೂ.2.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದ ಸಾಲದ ಯೋಜನೆ :**

- ರೈತನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿಕಾರ್ಡ್ ಬ್ಯಾಂಕುಗಳಲ್ಲಿ ಸದಸ್ಯತ್ವ ಹೊಂದಿರತಕ್ಕದ್ದು. ಅಥವಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ನಾಮಮಾತ್ರ ಸದಸ್ಯತ್ವ ಹೊಂದಿರತಕ್ಕದ್ದು.
- ರೈತರು ಪಹಣಿ ಮತ್ತು ಆಧಾರ್ ಕಾರ್ಡ್ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಸಂಘಗಳಿಗೆ ಅರ್ಜಿ ಸಲ್ಲಿಸಬೇಕು.
- ರೈತನು ವಾಸವಿರುವ ಸಂಘ ಅಥವಾ ಭೂಮಿ ಹೊಂದಿರುವ ಸಂಘ ಯಾವುದಾದರೂ ಒಂದು ಸಂಘದ ವ್ಯಾಪ್ತಿಯಲ್ಲಿ ಮಾತ್ರ ಸಾಲ ಪಡೆಯತಕ್ಕದ್ದು.
- ಸದರಿ ಆರ್‌ಟಿಸಿ ಮೇಲೆ ಇತರೇ ಬ್ಯಾಂಕುಗಳಲ್ಲಿ ಬೆಳೆ ಸಾಲ ಪಡೆದಿರಬಾರದು.
- ಈ ಯೋಜನೆಯು ಪಶು ಸಂಗೋಪನೆ/ ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳ ಸಾಲಕ್ಕಾಗಿ ಗರಿಷ್ಠ ರೂ.2.00 ಲಕ್ಷಗಳಿಗೆ ಹಾಗೂ ಬೆಳೆ ಸಾಲ, ಪಶು ಸಂಗೋಪನೆ ಮತ್ತು ಮೀನುಗಾರಿಕೆಗೆ ದುಡಿಯುವ ಬಂಡವಾಳದ ಸಾಲ ಒಟ್ಟುಗೂಡಿಸಿ ರೂ.3.00 ಲಕ್ಷಗಳಿಗೆ ಮಾತ್ರ ಅನ್ವಯವಾಗುತ್ತದೆ.
- ಬಡ್ಡಿ ಸಹಾಯಧನ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿ ನಿಗದಿಪಡಿಸಿದ ಸ್ಕೇಲ್ ಆಫ್ ಫೈನಾನ್ಸ್‌ಗೆ ಮಾತ್ರ ಲಭಿಸುತ್ತದೆ.
- ರೈತನು ಸಂಘವು ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮರುಪಾವತಿಸಬೇಕು.

2) **ರೂ.10.00 ಲಕ್ಷಗಳವರೆಗೆ ಮಧ್ಯಮಾವಧಿ/ ದೀರ್ಘಾವಧಿ ಕೃಷಿ ಸಾಲಗಳನ್ನು ಶೇಕಡಾ 3 ರ ಬಡ್ಡಿದರದಲ್ಲಿ ವಿತರಿಸುವ ಯೋಜನೆ.**

- ರೈತನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿಕಾರ್ಡ್ ಬ್ಯಾಂಕ್ ಅಥವಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಸದಸ್ಯತ್ವ ಹೊಂದಿರತಕ್ಕದ್ದು.
- ಭೂಮಿ ದಾಖಲೆಗಳು, ಭದ್ರತೆಗೆ ಬೇಕಾದ ದಾಖಲೆಗಳು ಮತ್ತು ಯೋಜನಾ ವರದಿಯೊಂದಿಗೆ ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಸಂಘಗಳಿಗೆ ಅರ್ಜಿ ಸಲ್ಲಿಸಬೇಕು.
- ರೈತನು ವಾಸವಿರುವ ಸಂಘ ಅಥವಾ ಭೂಮಿ ಹೊಂದಿರುವ ಸಂಘ ಯಾವುದಾದರೂ ಒಂದು ಸಂಘದ ವ್ಯಾಪ್ತಿಯಲ್ಲಿ ಮಾತ್ರ ಸಾಲ ಪಡೆಯತಕ್ಕದ್ದು.
- ರೈತನು ಸಂಘವು ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮತ್ತು ಶೇ.3 ರ ಬಡ್ಡಿಯನ್ನು ಪಾವತಿಸಬೇಕು.
- ನಬಾರ್ಡ್ ಗುರುತಿಸಿದ ಕೃಷಿ/ ಕೃಷಿ ಸಂಬಂಧಿತ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಪೈಕಿ ಲಘು ನೀರಾವರಿ, ಭೂ ಅಭಿವೃದ್ಧಿ, ಕೃಷಿ ಯಾಂತ್ರೀಕರಣ,

ಪ್ಲಾಂಟೇಷನ್ ಹಾಗೂ ತೋಟಗಾರಿಕೆ ಅಭಿವೃದ್ಧಿ, ಸಾವಯವ ಕೃಷಿ, ಪಶು ಸಂಗೋಪನೆ ಹಾಗೂ ಹೈನುಗಾರಿಕೆ, ಮೀನು ಕೃಷಿ, ರೇಷ್ಮೆ ಕೃಷಿ, ಜೇನು ಸಾಕಾಣಿಕೆ ಉದ್ದೇಶಗಳಿಗೆ ರೈತರಿಗೆ ನೀಡಲಾಗುವ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಯೋಜನೆಯು ಕೊಯ್ಲುವರೆಗಿನ ಮತ್ತು ಕೊಯ್ಲು ನಂತರದ ಕೃಷಿ ಚಟುವಟಿಕೆಗಳಿಗೆ ಅಂದರೆ ಮಾರುಕಟ್ಟೆಗೆ ಕೃಷಿ ಉತ್ಪನ್ನ ಸಿದ್ಧವಾಗುವ ಹಂತದವರೆಗೆ (Threshing, Winnowing, Cleaning, Grading, Drying) ಅವಶ್ಯವಿರುವ ಕೃಷಿ ಯಂತ್ರೋಪಕರಣ/ ಘಟಕಗಳನ್ನು ಹೊಂದಲು ನೀಡುವ ಸಾಲಗಳಿಗೂ ಸಹ ಅನ್ವಯವಾಗುತ್ತದೆ.

- ದ್ವಿಚಕ್ರ ವಾಹನ, ಜೀಪು, ಪಿಕಪ್ ವ್ಯಾನ್ ಹಾಗೂ ಇನ್ನು ಮುಂತಾದ ಯಾವುದೇ ಕೃಷಿ ಸಾಗಾಣಿಕೆಗೆ ಬಳಸುವ ವಾಹನ ಸಾಲಗಳಿಗೆ, ತೋಟದ ಮನೆ, ಗ್ರಾಮೀಣ ಗೋದಾಮುಗಳಿಗೆ, ದ್ವಿತೀಯ ಸಂಸ್ಕರಣೆ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ/ ಆಹಾರ ಸಂಸ್ಕರಣೆ, ಕೃಷಿ ಕ್ಲಿನಿಕ್‌ಗೆ ನೀಡುವ ಸಾಲಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.
- ವಿವಿಧ ರೀತಿಯ ಕೃಷಿಯೇತರ ಸಾಲಗಳಿಗೆ ಡಿಸಿಸಿ ಬ್ಯಾಂಕ್‌ಗಳ ಹಂತದಲ್ಲಿ ಸಾಲದ ನಿಯಮಾವಳಿಗಳನ್ನು ರೂಪಿಸಿ ಅದರನ್ವಯ ಸಾಲ ನೀಡಲಾಗುತ್ತಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ, (ನಾಮನಿರ್ದೇಶನ ಹೊಂದಿದವರು) ಇವರ
ಪ್ರಶ್ನೆ ಸಂಖ್ಯೆ: 853(967) ಗೆ ಮಾಹಿತಿ

# ಅನುಬಂಧ-04

(ರೂ. ಲಕ್ಷಗಳಲ್ಲಿ)

| ಡಿ.ಸಿ.ಸಿ. ಬ್ಯಾಂಕಿನ ಹೆಸರು | ಶಾಖೆಯ ಹೆಸರು | ನಕಲಿ ಉಳಿತಾಯ ಖಾತೆ/ ಸಾಲ ಖಾತೆಯಲ್ಲಿ ಆದ ಅವ್ಯವಹಾರ | | ಅವ್ಯವಹಾರದಲ್ಲಿ ಭಾಗಿಯಾದ ಸಿಬ್ಬಂದಿಗಳ ವಿವರ | | ವ್ಯವಹಾರ ಜರುಗಿದ ವರ್ಷ |
|---|---|---|---|---|---|---|
| | | ಖಾತೆಗಳ ಸಂಖ್ಯೆ | ಮೊತ್ತ | ಹೆಸರು | ಪದನಾಮ | |
| 1 | 2 | 3 | 4 | 5 | 6 | 7 |
| ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಶಿವಮೊಗ್ಗ | ನಗರ ಶಾಖೆ | 785 | 6277.63 | ಬಿ. ಶೋಭ | ಪ್ರಧಾನ ವ್ಯವಸ್ಥಾಪಕರು | 2014 |
| | | | | ವಿ. ರವೀಂದ್ರ | ಹಿರಿಯ ಸಹಾಯಕರು | |
| | | | | ಎಸ್.ಎ. ಶಿವಕುಮಾರ್ | ವಾಹನ ಚಾಲಕರು | |
| | | | | ಎನ್. ಶಶಿಧರ್ | ಹಿರಿಯ ಸಹಾಯಕರು | |
| | | | | ಜಿ. ರಾಮಚಂದ್ರ | ಸಹಾಯಕ ಪ್ರಧಾನ ವ್ಯವಸ್ಥಾಪಕರು | |
| | | | | ಶ್ರೀಮತಿ ಹೆಚ್. ಗೀತಾ | ವ್ಯವಸ್ಥಾಪಕರು | |
| | | | | ಶ್ರೀ ಎಸ್. ಮಾಲತೇಶ್, | ಅಟೆಂಡರ್ | |

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)